# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 01 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 395 |
| 02 | ಸದಸ್ಯರ ಹೆಸರು | : | ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ)<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 03 | ಉತ್ತರಿಸುವ ದಿನಾಂಕ | : | 07.12.2023 |
| 04 | ಉತ್ತರಿಸುವ ಸಚಿವರು | : | ಗೃಹ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯ ಪೊಲೀಸ್ ಇಲಾಖೆಯಲ್ಲಿ ನೀಡುವ ಸಮವಸ್ತ್ರಗಳಿಗೆ ಇರುವ ನಿಯಮ ಮತ್ತು ನಿಬಂಧನೆಗಳೇನು; | ಕರ್ನಾಟಕ ಪೊಲೀಸ್ ಮ್ಯಾನ್ಯುಯಲ್ ಅಧ್ಯಾಯ-4ರ ಕಂಡಿಕೆ 81 ರೀತ್ಯಾ ಇಲಾಖೆಯ ಎಲ್ಲಾ ಅಧಿಕಾರಿ / ಸಿಬ್ಬಂದಿಗಳು ಸಮವಸ್ತ್ರವನ್ನು ಧರಿಸುವುದು ಕಡ್ಡಾಯವಾಗಿರುತ್ತದೆ. ಆದರೆ, ಕೆಲವೊಂದು ವಿಶೇಷ ಘಟಕಗಳಾದ ರಾಜ್ಯ ಗುಪ್ತವಾರ್ತೆ, ಅಪರಾಧ ತನಿಖಾ ವಿಭಾಗ, ಇತ್ಯಾದಿಗಳಲ್ಲಿ ಅವರುಗಳು ನಿರ್ವಹಿಸುವ ಕರ್ತವ್ಯದ ಸ್ವರೂಪದ ಮೇಲೆ ಸಮವಸ್ತ್ರ ಧರಿಸುವುದು ಅಥವಾ ಧರಿಸದೇ ಇರುವುದು ಅವಲಂಬಿಸಿರುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 147 ಇಎಫ್‌ಎಸ್ 2011, ದಿನಾಂಕ 17.02.2012 ರಂತೆ ಪ್ರತಿ ಪೊಲೀಸ್ ಅಧಿಕಾರಿ / ಸಿಬ್ಬಂದಿಗೆ (ಪಿಸಿ ಹುದ್ದೆಯಿಂದ ಪಿಎಸ್‌ಐ ಹುದ್ದೆಯವರೆಗೆ) ವಾರ್ಷಿಕ 02 ಜೊತೆ ಖಾಕಿ ಸಮವಸ್ತ್ರಗಳನ್ನು ಖರೀದಿಸಿ ವಿತರಿಸಲಾಗುತ್ತಿದೆ. |
| ಆ. | ಯಾವ ದರ್ಜೆಯ ಅಧಿಕಾರಿಗಳಿಗೆ ಸಮವಸ್ತ್ರ ಭತ್ಯೆ ನೀಡಲಾಗುತ್ತಿದೆ; ಯಾವ ದರ್ಜೆಯ ಅಧಿಕಾರಿಗಳಿಗೆ ಸಮವಸ್ತ್ರ ನೀಡಲಾಗುತ್ತಿದೆ; | ಸಿಪಿಐ / ಪಿಐ ಮೇಲಿನ ದರ್ಜೆಯ ಅಧಿಕಾರಿಗಳಿಗೆ ಸಮವಸ್ತ್ರ ಭತ್ಯೆ ನೀಡಲಾಗುತ್ತಿದೆ.<br><br>ಪಿಸಿ ಹುದ್ದೆಯಿಂದ ಪಿಎಸ್‌ಐ ಹುದ್ದೆಯವರೆಗಿನ ಅಧಿಕಾರಿಗಳಿಗೆ ಸಮವಸ್ತ್ರ ನೀಡಲಾಗುತ್ತಿದೆ. |
| ಇ. | ಸಿಪಿಐ / ಪಿಐ ದರ್ಜೆಗೆ ಮೇಲ್ಪಟ್ಟ ಅಧಿಕಾರಿಗಳಿಗೆ ಸಮವಸ್ತ್ರ ಭತ್ಯೆ ನೀಡುವಂತೆ ಪಿಎಸ್‌ಐ ಮತ್ತು ಕೆಳಹಂತದ ಎಎಸ್‌ಐ, ಹೆಚ್‌ಸಿ, ಪಿಸಿ ಮತ್ತು ಫಾಲೋಯರ್‌ಗಳಿಗೂ ಕೂಡ ಸಮವಸ್ತ್ರ ಭತ್ಯೆ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; | ಪಿಎಸ್‌ಐ ಮತ್ತು ಕೆಳಹಂತದ ಎಎಸ್‌ಐ, ಹೆಚ್‌ಸಿ, ಪಿಸಿ ಗಳಿಗೆ ಸರ್ಕಾರದ ಆದೇಶದಂತೆ ಪ್ರತಿ ವರ್ಷ ಸಮವಸ್ತ್ರವನ್ನು ನೀಡುತ್ತಿರುವುದರಿಂದ, ಸಮವಸ್ತ್ರ ಭತ್ಯೆ ನೀಡುವ ಪ್ರಸ್ತಾವನೆ ಉದ್ಭವಿಸುವುದಿಲ್ಲ. |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಈ. | ಪಿಎಸ್‌ಐ ಮತ್ತು ಕೆಳಹಂತದ ಎಎಸ್‌ಐ, ಹೆಚ್‌ಸಿ, ಪಿಸಿ ಮತ್ತು ಫಾಲೋಯರ್ಸ್‌ಗಳಿಗೆ ನೀಡಲಾಗುತ್ತಿರುವ ಸಮವಸ್ತ್ರ ಕಳಪೆ ಗುಣಮಟ್ಟದ್ದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು; | ಪ್ರತಿ ವರ್ಷ ಕೆ.ಟಿ.ಪಿ.ಪಿ. ಕಾಯ್ದೆ ಪ್ರಕಾರ ಟೆಂಡರ್ ಪ್ರಕ್ರಿಯೆ ಮುಖಾಂತರ ಸಮವಸ್ತ್ರಗಳನ್ನು ಖರೀದಿಸಿದ, ನಂತರ ಜವಳಿ ಸಮಿತಿಯ ಲ್ಯಾಬ್‌ನಿಂದ ಪರೀಕ್ಷಿಸಿ, ನಂತರ ಇಲಾಖೆ ಆಂತರಿಕ ಕಿಟ್ ತಪಾಸಣಾ ಸಮಿತಿಯು ಅಂಗೀಕರಿಸಿದ ನಂತರ ಉತ್ತಮ ಗುಣಮಟ್ಟದ ಸಮವಸ್ತ್ರಗಳನ್ನು ಪಿಸಿ ಹುದ್ದೆಯಿಂದ ಪಿಎಸ್‌ಐ ಹುದ್ದೆಯವರೆಗಿನ ಅಧಿಕಾರಿಗಳಿಗೆ ವಿತರಿಸಲಾಗುತ್ತಿದೆ. |
| ಉ. | ಸಮವಸ್ತ್ರ ಮತ್ತು ಇನ್ನಿತರ ಅಗತ್ಯ ವಸ್ತುಗಳ ಸರಬರಾಜು ಗುತ್ತಿಗೆಯನ್ನು ಯಾವ ಕಂಪನಿಗೆ ನೀಡಲಾಗಿದೆ? (ವಿವರ ನೀಡುವುದು) | ಕೆ.ಟಿ.ಪಿ.ಪಿ. ಕಾಯ್ದೆ ಪ್ರಕಾರ ಟೆಂಡರ್ ಪ್ರಕ್ರಿಯೆ ಮುಖಾಂತರ ಸಮವಸ್ತ್ರ ಮತ್ತು ಇನ್ನಿತರ ಅಗತ್ಯ ವಸ್ತುಗಳನ್ನು ಖರೀದಿಸಲಾಗುತ್ತಿದೆ. ಟೆಂಡರ್‌ನಲ್ಲಿ ಯಶಸ್ವಿಯಾದ ಕನಿಷ್ಠ ದರ ನಮೂದಿಸಿದ ಬಿಡ್ಡುದಾರ (ಎಲ್1)02 ಕಂಪನಿಗೆ ಸರಬರಾಜು ಆದೇಶವನ್ನು ನೀಡಲಾಗುತ್ತಿದೆ. |

ಹೆಚ್‌ಡಿ 86 ಇಎಫ್‌ಎಸ್ 2023

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು